Bruhat Bengaluru Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿಬಿಎಂಪಿ/ವಾ.22/ಜೆ.ಸಿ ಉ/ಪಿಆರ್/22/2020-21

ಸಹಾಯಕ ಅಭಿಯಂತರರ ಕಛೇರಿ
ಜೆ.ಸಿ ನಗರ ಉಪವಿಭಾಗ, ಪೂರ್ವ ವಲಯ
ವಿ. ನಾಗೇನಹಳ್ಳಿ, ವಾರ್ಡ್ ನಂ: 22
ಬೆಂಗಳೂರು 560032.
ದಿನಾಂಕ: 06/03/2021

## ದಿನಾಂಕ: 06-03-2021 ರಂದು ವಾರ್ಡ್ ಸಮಿತಿಯ ಸಭೆಯ ನಡವಳಿಗಳು:-

**ಸಭೆಗೆ ಹಾಜರಿದ್ದವರು:**

- ಶ್ರೀ. ರಾಮಕೃಷ್ಣರೆಡ್ಡಿ, ಕಾರ್ಯಪಾಲಕ ಅಭಿಯಂತರರು, ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ವಾರ್ಡ್ ಸಮಿತಿ.
- ಶ್ರೀ. ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ
- ಶ್ರೀ. ರಾಜಶೇಖರ .ಎನ್ ಮಾಜಿ ಪಾಲಿಕೆ ಸದಸ್ಯರು, ವಿ. ನಾಗೇನಹಳ್ಳಿ.
- ಶ್ರೀ. ಶಿವನಾಯಕ್, ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ
- ಶ್ರೀ. ವಿನೋದ್, ಕಂದಾಯ ವಸೂಲಿಗಾರರು
- ಶ್ರೀ. ಮುನಿರಾಮಣ್ಣ, ಸದಸ್ಯರು
- ಶ್ರೀ. ಲಾಜರ್, ಬಿ.ಡ್ಬ್ಯೂ.ಎಸ್.ಎಸ್.ಬಿ ಪರೀವೀಕ್ಷಕರು
- ಶ್ರೀ. ಅಂಜದ್ ಅಹ್ಮದ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ. ಕಲಿಲ್ ರೆಹಮಾನ್, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ. ಚಂದ್ ಪಾಷ, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು
- ಶ್ರೀ. ಶೇಕ್ ರುಮಾನ್, ವಾರ್ಡ್ ಮಾರ್ಷಲ್ , ವಿ. ನಾಗೇನಹಳ್ಳಿ
- ಶ್ರೀ. ಜೆಸೆನ್ತ ಡೇವಿಡ್, ನಾಗರೀಕರು 4ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀ. ಎ.ಕೆ ಪ್ರೇಮ ಕುಮಾರ್, ನಾಗರೀಕರು 4ನೇ ಕ್ರಾಸ್ ಸನ್ ರೈಸ್ ಕಾಲೋನಿ
- ಶ್ರೀಮತಿ. ಪದ್ಮಿನಿ, ನಾಗರೀಕರು
- ಶ್ರೀ. ರವಿ, ನಾಗರೀಕರು, ಸನ್ ರೈಸ್ ಕಾಲೋನಿ
- ಶ್ರೀ. ಮುರಳಿ, ನಾಗರೀಕರು, ಸನ್ ರೈಸ್ ಕಾಲೋನಿ
- ಶ್ರೀ. ಶಂಕರ್ ಕುಮಾರ್, ನಾಗರೀಕರು, ಸಿ.ಐ.ಎಲ್ ಲೇಔಟ್
- ಶ್ರೀಮತಿ ಶೈಲಜ ರೆಡ್ಡಿ, ನಾಗರೀಕರು , ಯಾಗಪ್ಪ ಲೇಔಟ್
- ಶ್ರೀ ವಿಜಯ್ ಕುಮಾರ್, ನಾಗರೀಕರು , ಯಾಗಪ್ಪ ಲೇಔಟ್

- ಶ್ರೀ ದೀಪಕ್ ಕುಮಾರ್, ನಾಗರೀಕರು , ಯಾಗಪ್ಪ ಲೇಔಟ್
- ಶ್ರೀ. ಕೆ. ಗಂಗಾಧರ್, ನಾಗರೀಕರು ೪ನೇ ಕ್ರಾಸ್
- ಶ್ರೀ. ವಿಜಯ್ ಪಿಲಲ್, ನಾಗರೀಕರು, ಕನಕನಗರ
- ಶ್ರೀ. ವೆಂಕಟೇಶ್, ನಾಗರೀಕರು, ೧೭ನೇ ಕ್ರಾಸ್ ಕನಕನಗರ
- ಶ್ರೀ. ರಮೇಶ್, ನಾಗರೀಕರು, ೫ನೇ ಕ್ರಾಸ್, ಸನ್ ರೈಸ್ ಕಾಲೋನಿ

ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಶ್ರೀ. ಗುರುಸಿದ್ದಪ್ಪ .ಜಿ ರವರು ವಾರ್ಡ್ ಸಮಿತಿ ಅಧ್ಯಕ್ಷರು, ಸಮಿತಿಯ ಸದಸ್ಯರುಗಳು ಹಾಗೂ ವಾರ್ಡ್ ಸಂಖ್ಯೆ: 22ರ ನಾಗರೀಕರು ಹಾಗೂ ಎಲ್ಲಾ ವೃಂದದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ರಾಮಕೃಷ್ಣರೆಡ್ಡಿ, ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು, ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು. ಹಾಗೂ ಕಮಿಟಿ ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ: 06/02/2021 ರಂದು ನಡೆದ ವಾರ್ಡ್ ಸಮಿತಿಯ ನಡವಳಿಗಳನ್ನು ಪುನರಾವಲೋಕನ ಮಾಡಲಾಯಿತು. ಹಿಂದಿನ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳನ್ನು ಕುರಿತು ಈ ದಿನಾಂಕದವರೆಗೆ ನಿರ್ವಹಿಸಿದ ಕೆಲಸಗಳ ಬಗ್ಗೆ ಸದಸ್ಯರುಗಳಿಗೆ ತಿಳಿಸಲಾಯಿತು.

- ಶ್ರೀ. ಬೆನ್ನಿಸಬಾಸ್ಟಿನ್, ನಾಗರೀಕರು ಮಾತನಾಡುತ್ತಾ, ಸಿ.ಐ.ಎಲ್ ಲೇಔಟ್‌ನ ರಸ್ತೆಗಳಲ್ಲಿರುವ ಎಲೆಕ್ಟ್ರಿಕ್‌ಪೋಲ್‌ಗಳನ್ನು ಬೇರೆಕಡೆ ಸ್ಥಳಾಂತರಿಸುವಂತೆ ದೂರನ್ನು ನೀಡಿದ್ದರಿಂದ, ಈಗಾಗಲೇ ಬೆಸ್ಕಾಂ ಅಧಿಕಾರಿಗಳಿಗೆ ನೋಟೀಸ್ ಅನ್ನು ಹೊರಡಿಸಲಾಗಿರುತ್ತದೆ. ಹಾಗೂ ಬೆಸ್ಕಾಂ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳದೇ ಇರುವ ಕಾರಣ ಕೂಡಲೇ ನೋಡೆಲ್ ಅಧಿಕಾರಿಗಳ ಆದೇಶದಂತೆ ಸೂಕ್ತ ಕ್ರಮ ಕೈಗೊಳ್ಳಲು ಮತ್ತೊಮ್ಮೆ ನೋಟೀಸ್ ನೀಡುವುದಾಗಿ ತಿಳಿಸಿದರು.
- ಶ್ರೀ ಗುರುಸಿದ್ದಪ್ಪ .ಜಿ ಸಹಾಯಕ ಅಭಿಯಂತರರು ರವರು ಮಾತನಾಡುತ್ತಾ ಕನಕನಗರದ 17ನೇ ಕ್ರಾಸ್, 18ನೇ ಕ್ರಾಸ್ ಹಾಗೂ 21ನೇ ಕ್ರಾಸ್‌ನವರೆಗೆ ರಸ್ತೆ ಕಾಮಗಾರಿಯನ್ನು ಪ್ರಗತಿಯಲ್ಲಿರುವ ಬಗ್ಗೆ ನೋಡೆಲ್ ಅಧಿಕಾರಿಗಳಿಗೆ ತಿಳಿಸಿದರು.
- ಶ್ರೀಮತಿ ಉಷಾರಾಣಿ, ಹಿರಿಯ ಆರೋಗ್ಯ ಪರಿವೀಕ್ಷಕರು, ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ೭೦ ಜನರಿಗೆ ಕೋವಿಡ್ +ve ಬಂದಿರುವ ಬಗ್ಗೆ ತಿಳಿಸುತ್ತಾ ಹಾಗೂ ೬೦ ವರ್ಷ ಮೇಲ್ಪಟ್ಟವರಿಗೆ ಕೋವಿಡ್ ವ್ಯಾಪಿನೇಶನ್ ಅನ್ನು ಎಲ್ಲಿ ಬೇಕಾದರೂ ಹಾಕಿಸಿಕೊಳ್ಳಬಹುದೆಂದು ಹೇಳಿದರು. ಕನಕನಗರದಲ್ಲಿ ಈಗಾಗಲೇ ೧೨ ಜನರಿಗೆ ಕೋವಿಡ್ +ve ಕೇಸ್ ಗಳು ವರದಿಯಾಗಿದ್ದು, ಹಾಗೂ ೪೫ ವಯಸ್ಸಿನವರಿಂದ ೬೦ ವಯಸ್ಸಿನವರಿಗೆ ಆರೋಗ್ಯದಲ್ಲಿ ಏರುಪೇರಾಗಿದ್ದಲ್ಲಿ ಕೂಡಲೇ ಕೋವಿಡ್-೧೯ ಪರೀಕ್ಷೆ ಮಾಡಿಕೊಳ್ಳುವಂತೆ ತಿಳಿಸಿರುವುದಾಗಿ ಹೇಳಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಖಾತಾ ವರ್ಗಾವಣೆ, ಖಾತಾ ನೋಂದಣಿ, ತೆರಿಗೆ ಹಣ ಪಾವತಿ, ಹೊಸದಾಗಿ ಚುನಾವಣೆ ಗುರುತೀನ ಚೀಟಿ ಮಾಡುವ ಬಗ್ಗೆ, ಹಾಗೂ ಇನ್ನಿತರ ಕಂದಾಯ ಪಾವತಿಗಳ ಬಗ್ಗೆ, ಸಭೆಗೆ ಹಾಜರಿದ್ದ ಕಂದಾಯ ಇಲಾಖೆಯರೊಂದಿಗೆ ಹೆಚ್ಚಿನ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಯಿತ್ತು.

- ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಹೇಮಾಲತ ಎಂಬುವವರು 2018-19ನೇ ಸಾಲಿನಲ್ಲಿ ವಿದ್ಯಾರ್ಥಿ ಶುಲ್ಕ ಮರುಪಾವತಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣಾಂತರದಿಂದ ಕಲ್ಯಾಣ ಇಲಾಖೆಗೆ ತಡವಾಗಿ ಅರ್ಜಿಗಳು ಹೋಗಿರುತ್ತದೆ. ಹಾಗೂ ಕಳೆದ ಹಿಂದಿನ ಸಭೆಯಲ್ಲಿ ಕಾರ್ಯವಿಧಾನಗಳ ಬಗ್ಗೆ ಚರ್ಚಿಸಲಾಗಿದ್ದು, ಅದಕ್ಕೆ ಸಂಬಂಧಪಟ್ಟ ಕಡತವನ್ನು ಹೇಮಲತ ರವರಿಗೆ ಹಿಂತಿರುಗಿಸಿರುವುದಾಗಿ ತಿಳಿಸಿದರು. ಮುಂದುವರೆದು 2019-20ನೇ ಸಾಲಿನಲ್ಲಿ ವಿದ್ಯಾರ್ಥಿ ಮರು ಶುಲ್ಕ ಪಾವತಿಗೆ ಮರು ಹೊಸ ಅರ್ಜಿಗಳನ್ನು ವಾರ್ಡ್ ಕಮಿಟಿಯ ಮೂಲಕ ಸಲ್ಲಿಸಿರುತ್ತಾರೆ. ಹಾಗೂ ಕಡತವನ್ನು ಮರು ಸಿದ್ದಿಪಡಿಸಿ ಮೇಲಾಧಿಕರಿಗಳಿಗೆ ಕಳಿಸುವುದಾಗಿ ನೋಡೆಲ್ ಅಧಿಕಾರಿಗಳು ತಿಳಿಸಿದರು.

- ಸಿ.ಐ.ಎಲ್ ಲೇಔಟ್ ನಲ್ಲಿ **Eletrical pole** ಅನ್ನು ಸ್ಥಳಾಂತರಿಸುವ ಬಗ್ಗೆ ಸಿ4 ನ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಸಿದರು.

- ಶ್ರೀ ಕಮಲ್, ವಾರ್ಡ್ ನಾಗರೀಕರು ಮಾತನಾಡುತ್ತಾ, ಕನಕನಗರದ 2ನೇ 'ಎ' ಕ್ರಾಸ್ ರಸ್ತೆಯಲ್ಲಿ **street light** ಹಾಳಾಗಿದ್ದು, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ **street light** ಗಳನ್ನು ಸರಿಪಡಿಸಿರುವುದಾಗಿ ತಿಳಿಸಿದರು.

- ಕನಕನಗರದ 8ನೇ ಕ್ರಾಸ್ ರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸಲು ತಿಳಿಸಲಾಗಿತ್ತು. ಆದರೆ ಕೋರ್ಟ್ ನಲ್ಲಿ ಕೇಸ್ ಇದೆ ಎಂಬ ಮಾಹಿತಿ ವಾರ್ಡ್ ಸಭೆಯಲ್ಲಿ ತಿಳಿದುಬಂದಿರುವುದರಿಂದ ಮೊದಲು ಸ್ಥಳವನ್ನು ಪರೀಶೀಲಿಸಿ ತದನಂತರ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ತಿಳಿಸಿದರು. ಹಾಗೂ ಮುಂದಿನ ಅನುದಾನದಡಿಯಲ್ಲಿ ಈ ಕಾಮಗಾರಿಗಳನ್ನು ಸೇರ್ಪಡೆಗೊಳಿಸುವ ಬಗ್ಗೆ ತಿಳಿಸಿದರು.

- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಸನ್ ರೈಸ್ ಕಾಲೋನಿಯಲ್ಲಿ ಉಳಿದ ಎಲ್ಲಾ ಕಾಮಗಾರಿಯನ್ನು ಶ್ರೀಘ್ರವಾಗಿ ಮುಗಿಸುವಂತೆ ಶ್ರೀ ಪ್ರಸನ್ನ ಕುಮಾರ್ (ಗುತ್ತಿಗೆ ದಾರರು) ದೂರವಾಣಿ ಮೂಲಕ ರವರಿಗೆ ತಿಳಿಸಿದರು.

- ಶ್ರೀ. ಚಂದ್ ಪಾಷ, ಕೆ.ಆರ್.ಡ್ಬ್ಲ್ಯೂ.ಎ ಸದಸ್ಯರು, ಕನಕನಗರದ ೧೭ನೇ ಕ್ರಾಸ್ ರಸ್ತೆಯಲ್ಲಿ **street light** ಹಾಳಾಗಿದ್ದು, ಅದಕ್ಕೆ ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿ **street light** ಗಳನ್ನು ಸರಿಪಡಿಸಿರುವುದಾಗಿ ತಿಳಿಸಿದರು.

- ಶ್ರೀಮತಿ ಪದ್ಮಿನಿ, ನಾಗರೀಕರು ಮಾತನಾಡುತ್ತಾ, ಕನಕನಗರದ ೭ನೇ 'ಎ' ಕ್ರಾಸ್ ನಲ್ಲಿ ರಸ್ತೆಗಳ ಕಾಮಗಾರಿಯನ್ನು ದುರಸ್ಥಿ ಪಡಿಸುವ ಬಗ್ಗೆ ತಿಳಿಸಿದರು. ಹಾಗೂ ೯ನೇ 'ಎ' ಕ್ರಾಸ್ ರಸ್ತೆಯಲ್ಲಿ ತುರ್ತಾಗಿ ಗುಂಡಿಗಳನ್ನು ಮರು ತುಂಬಲು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ವೆಟ್ ಮಿಕ್ಸ್ ಮತ್ತು ಜಲ್ಲಿಗಳಿಂದ ಗುಂಡಿಗಳನ್ನು ತುಂಬಲು ಮುಂದಿನ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ತಿಳಿಸಿದರು.

- ಸಭೆಯಲ್ಲಿ ನೋಡೆಲ್ ಅಧಿಕಾರಿಗಳು ರಸ್ತೆಗಳಲ್ಲಿ ಅಲ್ಲಲ್ಲಿ ಗುಂಡಿಗಳ್ಳು ಬಿದ್ದಿರುವುದರಿಂದ ತಮ್ಮ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಗುಂಡಿಗಳನ್ನು ತುಂಬಲು ಸಭೆಗೆ ಹಾಜರಿದ್ದ ಸಹಾಯಕ ಅಭಿಯಂತರರಿಗೆ ತಿಳಿಸಿದರು. ಹಾಗೂ ಶೀಘ್ರವಾಗಿ ಗುಂಡಿಗಳನ್ನು ಮುಚ್ಚುವ ಬಗ್ಗೆ ಕ್ರಮಕೈಗೊಳ್ಳುವ ಬಗ್ಗೆ ತಿಳಿಸಿದರು.

- ಶ್ರೀ. ರವಿ, ನಾಗರೀಕರು ಮಾತನಾಡುತ್ತಾ, ೫ನೇ ಕ್ರಾಸ್ ಸನ್ ರೈಸ್ ಕಾಲೋನಿ ರಸ್ತೆಯಲ್ಲಿ ಒಳಚರಂಡಿ ಹಾಳಾಗಿದ್ದು, ಶೀಘ್ರವಾಗಿ ಸರಿಪಡಿಸುವಂತೆ ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ ಕಾಮಗಾರಿ ಪ್ರಗತಿಯಲ್ಲಿರುವ ಬಗ್ಗೆ ತಿಳಿಸಿದರು.
- ಶ್ರೀ. ವಿಜಯ್ ಪಿಲಲ್ ನಾಗರೀಕರು ಮಾತನಾಡುತ್ತಾ, ೭ನೇ ಮತ್ತು ೧೭ನೇ ಕ್ರಾಸ್ ನಲ್ಲಿ ರಸ್ತೆಗಳಲ್ಲಿ ಒಣ ಮರಗಳಿರುವುದರಿಂದ ಅರಣ್ಯ ಇಲಾಖೆಯವರಿಗೆ ನೋಟೀಸ್ ಅನ್ನು ನೀಡಿ ಒಣಮರಗಳನ್ನು ತೆರವುಗೊಳಿಸುವಂತೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಮುಂದಿನ ಸಭೆಯಲ್ಲಿ street light ನವರು ತಪ್ಪದೇ ವಾರ್ಡ್ ಸಮಿತಿ ಸಭೆಗೆ ಹಾಜರಾಗಬೇಕೆಂದು ತಿಳಿಸಿದರು.
- ಶ್ರೀ. ವೆಂಕಟೇಶ್, ನಾಗರೀಕರು ಮಾತನಾಡುತ್ತಾ, ಕನಕನಗರದ ೬ನೇ 'ಎ' ಕ್ರಾಸ್ ನಲ್ಲಿ Poth holes ತುಂಬಲು ತಿಳಿಸಿದರು. ಅದಕ್ಕೆ ಪ್ರತಿಯಾಗಿ ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಈಗಾಗಲೇ Poth holesಗಳನ್ನು ತುಂಬಲು ಕಾಮಗಾರಿಯನ್ನು ಕೈಗೊಳ್ಳುತ್ತೀರುವ ಬಗ್ಗೆ ತಿಳಿಸಿದರು.
- ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ, ಯಾಗಪ್ಪ ಲೇಔಟ್ 4ನೇ 'ಬಿ' ಕ್ರಾಸ್ ರಸ್ತೆಯಲ್ಲಿ ಅನಧಿಕೃತವಾಗಿ ಶೆಡ್ ಹಾಕಿರುವುದರಿಂದ ಕೂಡಲೇ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿರುವುದರಿಂದ ಈಗಾಗಲೇ ಸಂಬಂಧಪಟ್ಟವರಿಗೆ ೩ ಬಾರಿ ಮೌಖಿಕವಾಗಿ ತಿಳಿಸಿದರು ಸಹ ತೆರವುಗೊಳಿಸದೇ ಇದ್ದುದರಿಂದ ಕೂಡಲೇ ಶೆಡ್ ಗಳನ್ನು ತೆರವುಗೊಳಿಸುವಂತೆ ನೋಟೀಸ್ ಅನ್ನು ನೀಡುವುದಾಗಿ ತಿಳಿಸಿದರು.
- ಶ್ರೀ. ದೀಪಕ್ ಕುಮಾರ್, ನಾಗರೀಕರು ಮಾತನಾಡುತ್ತಾ, ಕನಕನಗರದ ಮುಖ್ಯರಸ್ತೆಗಳ ಫುಟ್ ಪಾತ್ ನಲ್ಲಿ ಅನಧಿಕೃತವಾಗಿ ಜಾಗವನ್ನು ಒತ್ತುವರಿ ಮಾಡಿಕೊಂಡವರ ಮೇಲೆ ಕ್ರಮಗೊಳ್ಳುವಂತೆ ತಿಳಿಸಿದರು.
- ಶ್ರೀ. ಗಂಗಾಧರ್ ಮಾತನಾಡುತ್ತಾ, ಪಟೇಲ್ ಮುನಿಯಪ್ಪ ಲೇಔಟ್ ನ ೪ನೇ ಕ್ರಾಸ್ ನಲ್ಲಿ ಅಡ್ಡಮೋರಿ ನಿರ್ಮಾಣ ಮಾಡುವಂತೆ ತಿಳಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯವನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಿಸಿದ ಅಧಿಕಾರಿಗಳು ಕೈಗೊಂಡ ಕ್ರಮದ ಬಗ್ಗೆ ವರದಿ ಪೂರ್ಣಗೊಂಡ ಭಾವಚಿತ್ರ ಹಾಗೂ ಲಿಖಿತ ವರದಿ ತಯಾರಿಸಿಕೊಂಡು ಹಾಜರಾಗಲು ಸೂಚಿಸಿ ಹಾಗೂ ಹಾಜರಾಗದೇ ಇರುವ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಹಾಜರಾಗಿರಬೇಕೆಂದು ಸೂಚಿಸಿದರು. ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ವಾರ್ಡ್ ಸಮಿತಿ ಕಾರ್ಯದರ್ಶಿಗಳಾದ ಗುರುಸಿದ್ದಪ್ಪ .ಜಿ ರವರ ವಂದನಾರ್ಪಣೆಯೊಂದಿಗೆ ಮದ್ಯಾಹ್ನ 12:45ಕ್ಕೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಶ್ರೀ ರಾಮಕೃಷ್ಣರೆಡ್ಡಿ) | (ಗುರುಸಿದ್ದಪ್ಪ .ಜಿ) |
| NODAL OFFICER WARD NO 22 BBMP | ವಾರ್ಡ್ ಸಮಿತಿ ಕಾರ್ಯದರ್ಶಿ |
| ನೋಡೆಲ್ ಅಧಿಕಾರಿಗಳು | ಮತ್ತು |
| ಹಾಗೂ | ಸಹಾಯಕ ಅಭಿಯಂತರರು ವಾರ್ಡ್ ನಂ:22 |
| ವಾರ್ಡ್ ಸಮಿತಿ ಅಧ್ಯಕ್ಷರು | |